ದಿನಾಂಕಃ 27.02.2020. ಅಸಲು ದಾವಾ ನಂಃ 53/2016

ಪಿ.ಡಬ್ಲ್ಯೂ 1: ಸಿದ್ದಮ್ಮ

ಸಾಕ್ಷಿಯನ್ನು  ಕರೆಸಲಾಯಿತು ಪ್ರಮಾಣ ವಚನ ಭೋಧಿಸಲಾಯಿತು.

ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆಸಿರುವ ಅಂಶಗಳು ಸರಿ ಹಾಗೂ ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ಮುಂದುವರಿದ ಮುಖ್ಯ ವಿಚಾರಣೆ ವಾದಿ ಪರ ವಕೀಲರಿಂದ

ಅಸಲು ದಾವಾ ಸಂಖ್ಯೆ 211/2015 ರಲ್ಲಿಯ ಆದೇಶ ಹಾಳೆಯ ದೃಡಿಕೃತ ನಕಲನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ 1 ಅಂತ ಗುರುತಿಸಲಾಯಿತು. ಅಸಲು ದಾವಾ ಸಂಖ್ಯೆ 211/2015 ರಲ್ಲಿಯ ವಾದ ಪತ್ರ, ಪ್ರತಿವಾದ ಪತ್ರ ಮತ್ತು ಮದ್ಯಂತರ ಅರ್ಜಿಯ  ದೃಡಿಕೃತ ನಕಲಗಳನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ನಿಪಿ 2 ರಿಂದ 4 ಅಂತ ಗುರುತಿಸಲಾಯಿತು. ಒಂದು ವಂಶ ವೃಕ್ಷವನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ 5 ಅಂತ ಗುರುತಿಸಲಾಯಿತು. ಸನಂ. 526 ರ ಪಹಣಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ 6 ಅಂತ ಗುರುತಿಸಲಾಯಿತು. ನನ್ನ ಗಂಡನ ತಾತ ನನ್ನ ಗಂಡನಿಗೆ ಬರೆದುಕೊಟ್ಟ ನೊಂದಾಯಿತ ಮೂಲ ಮೃತ್ಯು ಪತ್ರವನ್ನು ಹಾಜರುಪಡಿಸುತ್ತಿದ್ದು (ಪ್ರತಿವಾದಿ ಪರ ವಕೀಲರು ಸದರಿ ಸಾಕ್ಷಿಯು ಸದರಿ ಮೃತ್ಯು ಪತ್ರದ ಸಾಕ್ಷಿದಾರರು ಅಲ್ಲ ಹಾಗೂ ಅವರ ಹೆಸರಿಗೆ ಬರೆದುಕೊಟ್ಟ ಮೃತ್ಯು ಪತ್ರವಲ್ಲ ಆದ್ದರಿಂದ ಈ ಸಾಕ್ಷಿಯ ಮೂಲಕ ಸದರಿ ಮೃತ್ಯು ಪತ್ರವನ್ನು ನಿಶಾನೆಯಾಗಿ ಗುರುತಿಸಲು ಬರುವುದಿಲ್ಲ ಎಂದು ತಕರಾರು ಎತ್ತಿದ್ದು ಸದರಿ ಮೃತ್ಯು ಪತ್ರವನ್ನು ಕೇವಲ ಗುರುತಿಸುವಿಕೆಯ ಸಲುವಾಗಿ ಪ್ರತಿವಾದಿಯರ ತಕರಾರಿಗೆ ಒಳಪಟ್ಟು ಅದನ್ನು) ನಿಪಿ 7 ಅಂತ ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು
ಜೆ.ಎಂ.ಎಫ್.ಸಿ ನ್ಯಾಯಾಧೀಶರು, ಚಳ್ಳಕೆರೆ.